## 32. ನರೇಗಾ ನೆಮ್ಮದಿ : ಹೆಚ್ಚುವರಿಯಾಗಿ ರೂ.40,000 ಕೋಟಿ ಅನುದಾನ

ಪ್ರಧಾನಿ ಮೋದಿ ಅವರ ಪ್ಯಾಕೇಜಿನ ಕಡೇ ಕಂತನ್ನು ಘೋಷಣೆ ಮಾಡಿದ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ)ಗೆ ಹೆಚ್ಚುವರಿಯಾಗಿ ರೂ.40 ಸಾವಿರ ಕೋಟಿಗಳನ್ನು ನೀಡಿದ್ದಾರೆ. ಆರೋಗ್ಯ ವಲಯದ ಸುಧಾರಣೆ ಶೈಕ್ಷಣಿಕ ವಲಯಕ್ಕೆ ಟೆಕ್ನಾಲಜಿ ಟಚ್ ಹಾಗೂ ಸಾರ್ವಜನಿಕರ ಉದ್ದಿಮೆಗಳ ಖಾಸಗೀಕರಣದತ್ತ ಗಮನಹರಿಸಿದ್ದಾರೆ.

ನಗರ ಪ್ರದೇಶಗಳನ್ನು ಬಿಟ್ಟು ಗ್ರಾಮಗಳಿಗೆ ಲಕ್ಷಾಂತರ ಮಂದಿ ವಲಸೆ ಕಾರ್ಮಿಕರು ತೆರಳಿದ್ದು, ಇವರಿಗೆ ಉದ್ಯೋಗ ಕೊಡುವ ನಿಟ್ಟಿನಲ್ಲಿ ನರೇಗಾಗೆ ಹೆಚ್ಚುವರಿಯಾಗಿ ರೂ.40 ಸಾವಿರ ಕೋಟಿ ನೀಡಲು ಸ್ವಾವಲಂಬಿ ಭಾರತ್ ಪ್ಯಾಕೇಜ್‌ನಲ್ಲಿ ನಿರ್ಧರಿಸಲಾಗಿದೆ. ಬಜೆಟ್ ಅನುದಾನ ಮತ್ತು ರೂ.40 ಸಾವಿರ ಕೋಟಿಗಳಿಂದಾಗಿ ಸುಮಾರು ರೂ.300 ಕೋಟಿ ಮಾನವ ದಿನ ಕೆಲಸ ಕೊಡಬಹುದಾಗಿದೆ ಎಂಬುದು ನಿರ್ಮಲಾ ಸೀತಾರಾಮನ್ ಅವರು ತಿಳಿಸಿರುತ್ತಾರೆ.

**ರಾಜ್ಯಗಳ ಸಾಲ ಪ್ರಮಾಣ ಹೆಚ್ಚಳ:–**ಕೊರೊನಾ ಕಾಲದಲ್ಲಿ ರಾಜ್ಯ ಸರ್ಕಾರಗಳ ಸಂಕಷ್ಟ ನಿವಾರಿಸುವ ಸಲುವಾಗಿ ಅವುಗಳ ಸಾಲ ಮಿತಿಯನ್ನು ಶೇ.3 ರಿಂದ ಶೇ.5ಕ್ಕೆ ಏರಿಕೆ ಮಾಡಲಾಗಿದೆ. ಅಂದರೆ, ರಾಜ್ಯ ಜಿಡಿಪಿಯ ಪ್ರಮಾಣದ ಶೇ. 3ರಷ್ಟನ್ನು ಸಾಲವಾಗಿ ಪಡೆಯಲು ಅನುಮತಿ ಇತ್ತು. ಈಗ ಈ ಪ್ರಮಾಣ ಹೆಚ್ಚಿಸಿರುವುದರಿಂದ ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿಯಾಗಿ ರೂ.4.28 ಲಕ್ಷ ಕೋಟಿ ಸಿಗಲಿದೆ. ಆದರೆ, ಇದು ಈ ಹಣಕಾಸು ವರ್ಷಕ್ಕೆ ಮಾತ್ರ ಜಾರಿಯಲ್ಲಿ ಇರಲಿದೆ.

ಆಧಾರ:ಉದಯವಾಣಿ, ದಿನಾಂಕ:18.05.2020